ಓಎಸ್ 149/2023

ಡಿಡಬ್ಲ್ಯೂ 1

**ಸಾಕ್ಷಿಯು ದಿಃ 24.02.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ವಾದಿಗಳ ಪರ ವಕೀಲರಿಂದ**

ಮೃತ ಪುಟ್ಟಪ್ಪ ಮತ್ತು 1ನೇ ಪ್ರತಿವಾದಿಗೆ 1ನೇ ವಾದಿಯ ಗಂಡ ಮೃತ ಬಸವರಾಜು ಮತ್ತು 2 ರಿಂದ 4ನೇ ಪ್ರತಿವಾದಿಗಳು ಮಕ್ಕಳು ಎಂದರೆ ಸರಿ. 1ನೇ ವಾದಿಯ ಗಂಡ ಬಸವರಾಜು ರವರು ಸುಮಾರು 19 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ದಾವ ಆಸ್ತಿಗಳು 1ನೇ ಪ್ರತಿವಾದಿಯ ಗಂಡ ಪುಟ್ಟಪ್ಪ ರವರಿಗೆ ಅವರ ತಂದೆಯಿಂದ ಬಂದಿದ್ದು ಪುಟ್ಟಪ್ಪ ರವರ ಹೆಸರಿನಲ್ಲಿಯೇ ಖಾತೆ ಇತ್ತು ಎಂದರೆ ಸರಿ. ಪುಟ್ಟಪ್ಪ ರವರ ಮರಣಾ ನಂತರ ದಾವ ಆಸ್ತಿಗಳು 1ನೇ ಪ್ರತಿವಾದಿಯ ಹೆಸರಿಗೆ ಪೌತಿ ಖಾತೆಯಾಗಿರುತ್ತವೆ ಎಂದರೆ ಸರಿ. ಪುಟ್ಟಪ್ಪ ರವರ ಮರಣಾ ನಂತರ ಮೃತ ಬಸವರಾಜು ಮತ್ತು 1 ರಿಂದ 4ನೇ ಪ್ರತಿವಾದಿಗಳು ದಾವ ಆಸ್ತಿಗಳಲ್ಲಿ ಬೇಸಾಯ ಮಾಡುತ್ತಿದ್ದರು ಎಂದರೆ ಸರಿ. ಮೃತ ಬಸವರಾಜು ರವರಿಗೆ 1ನೇ ವಾದಿ ಹೆಂಡತಿ ಮತ್ತು 2ನೇ ವಾದಿ ಮಗಳಾಗಿದ್ದು ಅವರಿಬ್ಬರೇ ಬಸವರಾಜು ರವರ ವಾರಸುದಾರರು ಎಂದರೆ ಸರಿ. ಬಸವರಾಜು ರವರು ಮೃತಪಟ್ಟನಂತರ ವಾದಿಗಳು ಮತ್ತು 2 ರಿಂದ 4ನೇ ಪ್ರತಿವಾದಿಗಳು ದಾವ ಆಸ್ತಿಯಲ್ಲಿ ಜಂಟೀ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು 2ನೇ ಪ್ರತಿವಾದಿಯ ಮಗ ಎಂದರೆ ಸರಿ. ದಾವ ಆಸ್ತಿಗಳಲ್ಲಿ ಮೃತ ಬಸವರಾಜು ರವರಿಗೂ 1/4 ಭಾಗ ಹಕ್ಕು ಇದೆ ಎಂದರೆ ಸರಿಯಲ್ಲ.

2. ದಿಃ 03.04.2023 ರಂದು ವಾದಿಗಳು ಮತ್ತು 2 ರಿಂದ 4ನೇ ಪ್ರತಿವಾದಿಗಳ ನಡುವೆ ದಾವ ಆಸ್ತಿಗಳ ವಿಭಾಗಕ್ಕೆ ಸಂಬಂಧಿಸಿದಂತೆ ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ 2 ರಿಂದ 4ನೇ ಪ್ರತಿವಾದಿಗಳು ದಾವ ಆಸ್ತಿಗೆ ಸಂಬಂಧಿಸಿದಂತೆ ವಾದಿಗಳ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು 3 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ದಾವ ಆಸ್ತಿಗಳು ಒಟ್ಟು ಕುಟುಂಬದ ಸ್ವತ್ತಾಗಿರುವುದರಿಂದ ದಿಃ

ಓಎಸ್ 149/2023

ಡಿಡಬ್ಲ್ಯೂ.1

04.03.2022 ರ ದಾನಪತ್ರವನ್ನು ಮಾಡಲು 1ನೇ ಪ್ರತಿವಾದಿಗೆ ಯಾವುದೇ ಹಕ್ಕಿರಲಿಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಗಳು 1ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳೆಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಾವ ಆಸ್ತಿಗಳು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಲ್ಲ ಮತ್ತು ಪುಟ್ಟಪ್ಪ ರವರಿಗೆ ಅವರ ತಂದೆಯಿಂದ ಬಂದ ಆಸ್ತಿಗಳಾಗಿರುವ ಕಾರಣ 1ನೇ ಪ್ರತಿವಾದಿಯು ದಾವ ಆಸ್ತಿಗಳನ್ನು ದಾನಪತ್ರ ಮಾಡಲು ಹಕ್ಕಿರಲಿಲ್ಲ ಎಂದರೆ ಸರಿಯಲ್ಲ. ದಾನಪತ್ರಹವು ಅಸಿಂಧುವಾಗಿರುವುದರಿಂದ ದಾನ ಪತ್ರದ ಆಧಾರದ ಮೇಲೆ ನನಗೆ ದಾವ ಆಸ್ತಿಗಳ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಗಳ ಮೇಲೆ ಮೃತ ಬಸವರಾಜು ರವರಿಗೆ ಇದ್ದ ಭಾಗಾಂಶಕ್ಕೆ ವಾದಿಗಳು ಹಕ್ಕುದಾರರಾಗಿದ್ದು ವಾದಿಗಳಿಗೆ ಹಿಸ್ಸೆ ಕೊಡುವುದನು ತಪ್ಪಿಸಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ